# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 620 |
| ಸದಸ್ಯರ ಹೆಸರು | : | ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 12.03.2025 |
| ಉತ್ತರಿಸುವ ಸಚಿವರು | : | ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸರಕಾರಿ ಸ್ಥಳಗಳಲ್ಲಿ ಮುಸ್ಲಿಂಮರಿಗೆ ಪ್ರಾರ್ಥನೆಗೆಂದು ಗುರುತಿಸಲಾದ ಸ್ಥಳಗಳ ಸಂಖ್ಯೆ ಎಷ್ಟು; ಅವು ಯಾವುವು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಸರ್ಕಾರಿ ಸ್ಥಳಗಳಲ್ಲಿ ಮುಸ್ಲಿಂಮರಿಗೆ ಪ್ರಾರ್ಥನೆಗೆಂದು ಗುರುತಿಸಲಾದ ಸ್ಥಳಗಳು ಇರುವುದಿಲ್ಲ. |
| ಆ) | ಮುಸ್ಲಿಂಮರಿಗೆ ಪ್ರಾರ್ಥನೆಗೆ ಅವಕಾಶ ಕಲ್ಪಿಸಿದ ಸರಕಾರಿ ಜಾಗವನ್ನು ಉಪಯೋಗಿಸಿದ ಕಾರಣಕ್ಕೆ ಬಾಡಿಗೆಯನ್ನು ನಿಗಧಿ ಪಡಿಸಲಾಗಿದೆಯೇ; ಇಲ್ಲವಾದಲ್ಲಿ ಕಾರಣವೇನು; ಹಾಗಿದ್ದಲ್ಲಿ ಬಾಡಿಗೆ ದರವನ್ನು ನಿಗಧಿ ಪಡಿಸಲಾಗುವುದು ಯಾವಾಗ; (ವಿವರ ನೀಡುವುದು) | ಉದ್ಭವಿಸುವುದಿಲ್ಲ |
| ಇ) | ಮುಸ್ಲಿಂಮರಿಗೆ ಪ್ರಾರ್ಥನೆಗೆ ಅವಕಾಶ ಕಲ್ಪಿಸಿದ ಸರಕಾರಿ ಜಾಗದಲ್ಲಿ ಗೋಡೆ ನಿರ್ಮಾಣಕ್ಕೆ ಅವಕಾಶ ಕಲ್ಪಿಸಲಾಗಿದೆಯೇ; ಯಾವ ನಿಯಮದ ಅನ್ವಯ ಸರಕಾರಿ ಜಾಗದಲ್ಲಿ ಗೋಡೆ ನಿರ್ಮಿಸಲು ಅನುಮತಿ ನೀಡಲಾಗಿದೆ; (ಅನುಮತಿ ಪತ್ರದೊಂದಿಗೆ ಹಾಗೂ ಜಿಲ್ಲಾವಾರು ಮಾಹಿತಿ ನೀಡುವುದು) | ಉದ್ಭವಿಸುವುದಿಲ್ಲ |
| ಈ) | ಮುಸ್ಲಿಂಮರಿಗೆ ವರ್ಷಕ್ಕೆ ಎರಡು ಬಾರಿ ಮಾತ್ರವೇ ಪ್ರಾರ್ಥನೆಗೆ ಅವಕಾಶ ಕಲ್ಪಿಸಿದ ಸರಕಾರಿ ಜಾಗದಲ್ಲಿ ಗೋಡೆಯನ್ನು ಅನಧಿಕೃತವಾಗಿ ಅಕ್ರಮವಾಗಿ ನಿರ್ಮಿಸಿದಲ್ಲಿ ಸದರಿ ಗೋಡೆಯನ್ನು ತೆರವುಗೊಳಿಸದಿರಲು ಕಾರಣವೇನು; ಈ ಅಕ್ರಮ ನಿರ್ಮಾಣಕ್ಕೆ ಸಹಕರಿಸಿದ ಕಂದಾಯ ಇಲಾಖೆಯ ಯಾವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ; ಈ ಅಕ್ರಮ ನಿರ್ಮಾಣಗಳನ್ನು ಎಂದು ತೆರವುಗೊಳಿಸಲಾಗುವುದು; (ವಿವರ ನೀಡುವುದು) | ಉದ್ಭವಿಸುವುದಿಲ್ಲ |
| ಉ) | ಮುಸ್ಲಿಂಮರಿಗೆ ವರ್ಷಕ್ಕೆ ಎರಡು ಬಾರಿ ಮಾತ್ರವೇ ಪ್ರಾರ್ಥನೆಗೆ ಅವಕಾಶ ಕಲ್ಪಿಸಿದ ಸರಕಾರಿ ಜಾಗದಲ್ಲಿ ಇತರ ಧರ್ಮದವರು ತಮ್ಮ ಧಾರ್ಮಿಕ ಕಾರ್ಯಕ್ರಮಗಳನ್ನು ನಿರ್ವಹಿಸಬಾರದು ಎಂಬುದಾಗಿ ಸರಕಾರ ಕಾನೂನು ಮಾಡಿದೆಯೇ; ಈ ಕುರಿತು ಸರಕಾರದ ನಿಲುವೇನು; ರಾಜ್ಯದ ಎಷ್ಟು ಸ್ಥಳಗಳಲ್ಲಿ ಇತರ ಧರ್ಮದವರ ಪ್ರಾರ್ಥನೆ ಮತ್ತು ಉತ್ಸವಗಳಿಗೆ ಅವಕಾಶ ಕಲ್ಪಿಸಲಾಗಿದೆ; | ಇಂತಹ ಯಾವುದೇ ಕಾನೂನುಗಳನ್ನು ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯಿಂದ ಜಾರಿಗೊಳಿಸಿರುವುದಿಲ್ಲ. |

..2

| | | |
|---|---|---|
| ಊ) | ಸರಕಾರಿ ಮೈದಾನದಲ್ಲಿ ಯಾವುದೇ ಧರ್ಮ ಸಮುದಾಯದವರು ತಮ್ಮ ಧಾರ್ಮಿಕ ಆಚರಣೆಗಳನ್ನು ನಿರ್ವಹಿಸಲು ಅನುವಾಗುವಂತೆ ಏಕ ರೂಪ ನಿಯಮಾವಳಿಗಳನ್ನು ಜಾರಿಗೆ ತರುವ ಕುರಿತು ಸರಕಾರದ ನಿಲುವೇನು? | ಇಂತಹ ಯಾವುದೇ ಪ್ರಸ್ತಾವನೆಯು ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯ ಪರಿಶೀಲನೆಯಲ್ಲಿ ಇರುವುದಿಲ್ಲ. |

**ಸಂಖ್ಯೆ: MWD-LMQ/31/2025**

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು